# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 1581

**ಸದಸ್ಯರ ಹೆಸರು** : ಶ್ರೀ ಡಿ.ಎಸ್ ಅರುಣ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

**ಉತ್ತರಿಸುವವರು** : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

**ಉತ್ತರಿಸಬೇಕಾದ ದಿನಾಂಕ** : 21-03-2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳಿಂದ ಪ್ರತಿ ಮನೆಗೆ ಸರಾಸರಿ 50 ರಿಂದ 55 ಸಾವಿರ ವಾರ್ಷಿಕ ಆದಾಯ ಹೆಚ್ಚಾಗಲಿದೆ ಎಂದು ಭರವಸೆ ನೀಡಿದ್ದು ಇದು ಪೂರ್ಣವಾಗಿ ಫಲಿಸಿದೆಯೇ; | **<u>ಸಾರಿಗೆ ಇಲಾಖೆ :</u>**<br><br>ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕ.ರಾ.ರ.ಸಾ.ನಿಗಮ), ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬೆಂ.ಮ.ಸಾ.ಸಂಸ್ಥೆ), ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ವಾ.ಕ.ರ.ಸಾ.ಸಂಸ್ಥೆ) ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ (ಕ.ಕ.ರ.ಸಾ.ನಿಗಮ) ಸಾರಿಗೆಗಳಲ್ಲಿ ಕರ್ನಾಟಕ ರಾಜ್ಯಾದ್ಯಂತ ನಗರ, ಸಾಮಾನ್ಯ ಹಾಗೂ ವೇಗದೂತ (Express) ಬಸ್ಸುಗಳಲ್ಲಿ ಕರ್ನಾಟಕ ರಾಜ್ಯದ (Domicile of Karnataka) ಎಲ್ಲಾ ಮಹಿಳೆಯರು (ವಿದ್ಯಾರ್ಥಿನಿಯರು ಸೇರಿದಂತೆ) ಮತ್ತು ಲಿಂಗತ್ವ ಅಲ್ಪಸಂಖ್ಯಾತರು ಉಚಿತವಾಗಿ ಪ್ರಯಾಣಿಸಲು ದಿನಾಂಕ: 11.06.2023ರಿಂದ ಶಕ್ತಿ ಯೋಜನೆಯನ್ನು ಜಾರಿಗೊಳಿಸಿ, ಆದೇಶಿಸಲಾಗಿದೆ.<br><br>ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ 2023-24ನೇ ಸಾಲಿನಲ್ಲಿ ಮತ್ತು 2024-25ನೇ ಸಾಲಿನಲ್ಲಿ (ಫೆಬ್ರುವರಿ-2025) ರವರೆಗೆ ಶಕ್ತಿ ಯೋಜನೆಯಡಿ ಉಚಿತವಾಗಿ ಪ್ರಯಾಣಿಸಿರುವ ಫಲಾನುಭವಿಗಳ ಸಂಖ್ಯೆ ಮತ್ತು ವೆಚ್ಚದ ಮಾಹಿತಿಯು ಕೆಳಕಂಡಂತಿದೆ:- |

| ಕ.ರಾ.ರ.ಸಾ.ನಿಗಮ | | |
|---|---|---|
| **ವರ್ಷ** | **ಶೂನ್ಯ ಟಿಕೇಟ್‌ಗಳ ಸಂಖ್ಯೆ (ರೂ.ಲಕ್ಷಗಳಲ್ಲಿ)** | **ವೆಚ್ಚ** |
| 2023-24 | 5626.93 | 166442.13 |
| 2024-25 | 6927.24 | 217137.91 |
| **ಒಟ್ಟು** | **12554.17** | **383580.04** |

| ಬೆಂ.ಮ.ಸಾ.ಸಂಸ್ಥೆ | | |
|---|---|---|
| **ವರ್ಷ** | **ಶೂನ್ಯ ಟಿಕೇಟ್‌ಗಳ ಸಂಖ್ಯೆ (ರೂ. ಲಕ್ಷಗಳಲ್ಲಿ)** | **ವೆಚ್ಚ** |
| 2023-24 | 5784.36 | 75509.63 |
| 2024-25 | 7049.38 | 95473.54 |
| **ಒಟ್ಟು** | **12833.74** | **170983.17** |

| ವಾ.ಕ.ರ.ಸಾ.ಸಂಸ್ಥೆ | | |
|---|---|---|
| ವರ್ಷ | ಶೂನ್ಯ ಟಿಕೇಟ್‌ಗಳ ಸಂಖ್ಯೆ (ರೂ. ಲಕ್ಷಗಳಲ್ಲಿ) | ವೆಚ್ಚ |
| 2023-24 | 4214.08 | 107612.96 |
| 2024-25 | 5157.20 | 136317.90 |
| **ಒಟ್ಟು** | **9371.28** | **243930.86** |

| ಕ.ಕ.ರ.ಸಾ.ನಿಗಮ | | |
|---|---|---|
| ವರ್ಷ | ಶೂನ್ಯ ಟಿಕೇಟ್‌ಗಳ ಸಂಖ್ಯೆ (ರೂ. ಲಕ್ಷಗಳಲ್ಲಿ) | ವೆಚ್ಚ |
| 2023-24 | 2681.27 | 88471.87 |
| 2024-25 | 3186.90 | 110926.76 |
| **ಒಟ್ಟು** | **5868.17** | **199398.63** |

**ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ :**

ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಅನ್ನಭಾಗ್ಯ ಯೋಜನೆಯನ್ನು ಆಹಾರ ಇಲಾಖೆಯಿಂದ ಜಾರಿಗೊಳಿಸಲಾಗಿರುತ್ತದೆ.

ಕರ್ನಾಟಕ ರಾಜ್ಯದಲ್ಲಿರುವ ಅಂತ್ಯೋದಯ ಅನ್ನ ಯೋಜನೆ ಮತ್ತು ಆದ್ಯತಾ ಪಡಿತರ ಚೀಟಿಗಳ ಪ್ರತಿ ಫಲಾನುಭವಿಗೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ವಯ (NFSA) ವಿತರಿಸಲಾಗುವ 05 ಕೆ.ಜಿ. ಆಹಾರಧಾನ್ಯಗಳೊಂದಿಗೆ ರಾಜ್ಯ ಸರ್ಕಾರದ ವತಿಯಿಂದ ಹೆಚ್ಚುವರಿಯಾಗಿ 05 ಕೆ.ಜಿ. ಆಹಾರಧಾನ್ಯವನ್ನು ಸೇರಿಸಿ, ಉಚಿತವಾಗಿ ವಿತರಿಸಲು ಸರ್ಕಾರದ ಆದೇಶ ಸಂಖ್ಯೆ: ಆನಾಸ 84 ಡಿಆರ್‌ಎ 2023, ದಿನಾಂಕ: 01.07.2023 ರಲ್ಲಿ ಆದೇಶಿಸಲಾಗಿರುತ್ತದೆ. ಪ್ರತಿ ಅಂತ್ಯೋದಯ ಅನ್ನಯೋಜನೆ ಮತ್ತು ಆದ್ಯತಾ ಪಡಿತರ ಚೀಟಿಗಳ ಪ್ರತಿ ಫಲಾನುಭವಿಗೆ ಪ್ರತಿ ತಿಂಗಳು 05 ಕೆ.ಜಿ ಆಹಾರ ಧಾನ್ಯದ ಬದಲಾಗಿ ಪ್ರತಿ ಕೆ.ಜಿ.ಗೆ ರೂ.34/- ರಂತೆ ಪಡಿತರ ಚೀಟಿಯಲ್ಲಿನ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ (DBT) ಮೂಲಕ ಹಣವನ್ನು ವರ್ಗಾಯಿಸಲು ಆದೇಶಿಸಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಆನಾಸ 199 ಡಿಆರ್‌ಎ 2023, ದಿನಾಂಕ: 19.02.2025ರಲ್ಲಿ ಪ್ರಸ್ತುತ ರಾಜ್ಯದಲ್ಲಿರುವ ಅಂತ್ಯೋದಯ ಅನ್ನಯೋಜನೆ (AAY) ಮತ್ತು ಆದ್ಯತಾ ಪಡಿತರ ಚೀಟಿ (PHH) ಪ್ರತಿ ಫಲಾನುಭವಿಗೆ ಪ್ರತಿ ತಿಂಗಳು ಪಡಿತರ ಚೀಟಿಯಲ್ಲಿನ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ (DBT) ಮುಖಾಂತರ ಹಣವನ್ನು ವರ್ಗಾಯಿಸುವ ಪ್ರಕ್ರಿಯೆಯ ಬದಲಾಗಿ ಫೆಬ್ರುವರಿ 2025ರ ಮಾಹೆಯಿಂದ ಅರ್ಹ ಫಲಾನುಭವಿಗಳಿಗೆ 05 ಕೆ.ಜಿ. ಅಕ್ಕಿಯನ್ನು ವಿತರಿಸಲು ಆದೇಶಿಸಲಾಗಿದ್ದು, ಕೇಂದ್ರ ಸರ್ಕಾರದಿಂದ ನೀಡುವ 05 ಕೆ.ಜಿ. ಅಕ್ಕಿಯ ಜೊತೆಗೆ ರಾಜ್ಯ ಸರ್ಕಾರದಿಂಧ ಹೆಚ್ಚುವರಿ 05 ಕೆ.ಜಿ. ವಿತರಿಸಲು ಕ್ರಮವಹಿಸಲಾಗಿದೆ. (ಆದೇಶದ ಪ್ರತಿ ಲಗತ್ತಿಸಿದೆ)

| | | |
|---|---|---|
| | | **<u>ಇಂಧನ ಇಲಾಖೆ:</u>**<br><br>ಗೃಹಜ್ಯೋತಿ ಯೋಜನೆಯಡಿ 2024-25ರ ಸಾಲಿನಲ್ಲಿ ಒಟ್ಟು ರೂ.9,157.66 ಕೋಟಿಗಳ ಸಹಾಯಧನ ಬಿಡುಗಡೆಗೊಳಿಸಲಾಗಿದ್ದು, ಜನವರಿ-2025 ರ ಅಂತ್ಯಕ್ಕೆ ಒಟ್ಟು ರೂ.1.63 ಕೋಟಿ ಗೃಹ ಬಳಕೆ ಗ್ರಾಹಕರು ಈ ಯೋಜನೆಯ ಸೌಲಭ್ಯ ಪಡೆದುಕೊಂಡಿರುತ್ತಾರೆ. ಸದರಿಯಂತೆ ಪ್ರತಿ ಗೃಹ ಬಳಕೆ ಗ್ರಾಹಕರಿಗೆ ಸರಾಸರಿ ವಾರ್ಷಿಕವಾಗಿ ರೂ.5,611 ಗಳು ಸಂದಾಯವಾಗಿರುತ್ತದೆ.<br><br>**<u>ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ :</u>**<br><br>ಕರ್ನಾಟಕ ಸರ್ಕಾರದ ಐದು ಖಾತರಿ ಯೋಜನೆಗಳಲ್ಲಿ ಒಂದಾದ ಯುವನಿಧಿ ಯೋಜನೆಯನ್ನು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯಿಂದ ದಿನಾಂಕ:26.12.2023ರಿಂದ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಡಿ ಪದವೀಧರರಿಗೆ/ಸ್ನಾತಕೋತ್ತರ ಪದವೀಧರರಿಗೆ ಮಾಹೆವಾರು ರೂ. 3,000/- ಮತ್ತು ಡಿಪ್ಲೋಮಾ (6 ಬೋರ್ಡ್‌ಗಳಿಂದ) ತೇರ್ಗಡೆಯಾದವರಿಗೆ ಮಾಹೆವಾರು ರೂ. 1,500/- ನಿರುದ್ಯೋಗ ಭತ್ಯೆಯನ್ನು ಗರಿಷ್ಠ 2 ವರ್ಷದ ಅವಧಿಗೆ ಅಥವಾ ಉದ್ಯೋಗ ಸಿಗುವವರೆಗೆ (ಇವುಗಳಲ್ಲಿ ಯಾವುದು ಮೊದಲೊ ಅಲ್ಲಿಯವರೆಗೆ) ನೇರ ನಗದು ವರ್ಗಾವಣೆ ಮೂಲಕ (ಡಿಬಿಟಿ) ಪಾವತಿಸಲಾಗುತ್ತಿದೆ.<br><br>ಯುವನಿಧಿ ಯೋಜನೆಯು ಪ್ರಾರಂಭವಾದಾಗಿನಿಂದ ಈವರೆಗೆ ಅಂದರೆ ಫೆಬ್ರುವರಿ 2025ರ ಅಂತ್ಯಕ್ಕೆ 1,88,699 ಫಲಾನುಭವಿಗಳಿಗೆ ಒಟ್ಟು ರೂ. 326.95 ಕೋಟಿಗಳ ನಿರುದ್ಯೋಗ ಭತ್ಯೆಯನ್ನು ನೇರ ನಗದು ವರ್ಗಾವಣೆ ಮೂಲಕ ಪಾವತಿಸಲಾಗಿದೆ.<br><br>**<u>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:</u>**<br><br>ಕರ್ನಾಟಕ ಸರ್ಕಾರದ 5 ಖಾತ್ರಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಯಡಿ ಆಗಸ್ಟ್-2023ರ ಮಾಹೆಯಿಂದ ಡಿಸೆಂಬರ್-2024ರ ಮಾಹೆಯವರೆಗೆ ಒಟ್ಟು 17 ಕಂತು (ಪ್ರತಿ ಫಲಾನುಭವಿಗೆ ರೂ.2,000/- ದಂತೆ ಒಟ್ಟು ರೂ.34,000/-)ಗಳ ಧನಸಹಾಯ ಪಾವತಿ ಮಾಡಲಾಗಿದೆ. |
| ಆ) | ಕಳೆದ 2 ವರ್ಷದಿಂದ ಗೃಹ ಲಕ್ಷ್ಮಿ ಯೋಜನೆಯಡಿ ಮಾಹೆವಾರು ಹಣ ಬಿಡುಗಡೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಹಣ ಬಿಡುಗಡೆ ಮಾಡಲು ಕೈಗೊಂಡ ಕ್ರಮವೇನು; | ಗೃಹಲಕ್ಷ್ಮಿ ಯೋಜನೆಯಡಿ ಆಗಸ್ಟ್-2023ರ ಮಾಹೆಯಿಂದ ಡಿಸೆಂಬರ್-2024ರ ಮಾಹೆಯವರೆಗೆ ಒಟ್ಟು 17 ಕಂತು (ಪ್ರತಿ ಫಲಾನುಭವಿಗೆ ರೂ.2,000/- ದಂತೆ ಒಟ್ಟು ರೂ.34,000/-)ಗಳ ಧನಸಹಾಯ ಪಾವತಿ ಮಾಡಲಾಗಿದೆ. ಅಂದರೆ ಯೋಜನೆ ಆರಂಭವಾದಾಗಿನಿಂದ ಇದುವರೆಗೂ ಒಟ್ಟು 17 ಮಾಹೆಗಳ ಧನಸಹಾಯ ಪಾವತಿಯಾಗಿದ್ದು, ಜನವರಿ ಮತ್ತು ಫೆಬ್ರುವರಿ-2025ರ ಮಾಹೆಗಳಿಗೆ ಧನಸಹಾಯ ಪಾವತಿಸಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| ಇ) | ಗೃಹಲಕ್ಷ್ಮಿ ಯೋಜನೆಯಡಿಯಲ್ಲಿ ಮಾಹೆವಾರು ಹಣ ಬಿಡುಗಡೆ ಆಗದಿರಲು ಸರ್ಕಾರದ ಮುಂದಿರುವ ಸಮಸ್ಯೆಗಳೇನು; ಇದುವರೆಗೆ ಮಾಹೆವಾರು ಬಿಡುಗಡೆ ಆಗಿರುವ ಹಣ ಎಷ್ಟು? (ವಿವರ ಒದಗಿಸುವುದು) | ಗೃಹಲಕ್ಷ್ಮಿ ಯೋಜನೆಯ ಅನುಷ್ಠಾನಕ್ಕಾಗಿ 2023-24ನೇ ಸಾಲಿನಲ್ಲಿ ರೂ.17,000.00 ಕೋಟಿಗಳ ಅನುದಾನ ಬಿಡುಗಡೆಯಾಗಿರುತ್ತದೆ. 2024-25ನೇ ಸಾಲಿನಲ್ಲಿ ರೂ. 28,608.40 ಕೋಟಿಗಳ ಅನುದಾನ ನಿಗಧಿಯಾಗಿರುತ್ತದೆ.<br><br>ಆಗಸ್ಟ್-2023ರಿಂದ ಡಿಸೆಂಬರ್-2024ರ ಮಾಹೆಯವರೆಗೆ ಅನುದಾನ ಬಿಡುಗಡೆಗೊಳಿಸಿ ಧನಸಹಾಯ ಪಾವತಿಸಿದ ಮಾಹೆವಾರು ವಿವರವನ್ನು ಅನುಬಂಧದಲ್ಲಿ ಒದಗಿಸಿದೆ. |

**ಸಂಖ್ಯೆ: ಮಮಇ 72 ಮಮಅ 2025**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು

# ಅನುಬಂಧ

## ಮಾನ್ಯ ವಿಧಾನಪರಿಷತ್ ಸದಸ್ಯರಾದ ಶ್ರೀ ಡಿ. ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1310 (1581)

| ಕ್ರ.ಸಂ | ಮಾಹೆ | ಅನುದಾನ ಬಿಡುಗಡೆಗೊಳಿಸಿ ಧನಸಹಾಯ ಪಾವತಿಸಿದ ಮೊತ್ತ (ರೂ.ಕೋಟಿಗಳಲ್ಲಿ) |
|---|---|---|
| 1 | ಆಗಸ್ಟ್-2023 | 2118.00 |
| 2 | ಸೆಪ್ಟಂಬರ್-2023 | 2199.74 |
| 3 | ಅಕ್ಟೋಬರ್-2023 | 2244.63 |
| 4 | ನವೆಂಬರ್-2023 | 2258.83 |
| 5 | ಡಿಸೆಂಬರ್-2023 | 2271.41 |
| 6 | ಜನವರಿ-2024 | 2312.56 |
| 7 | ಫೆಬ್ರುವರಿ-2024 | 2360.56 |
| 8 | ಮಾರ್ಚ್-2024 | 2400.64 |
| 9 | ಏಪ್ರಿಲ್-2024 | 2403.91 |
| 10 | ಮೇ-2024 | 2405.04 |
| 11 | ಜೂನ್-2024 | 2430.64 |
| 12 | ಜುಲೈ-2024 | 2436.79 |
| 13 | ಆಗಸ್ಟ್-2024 | 2441.16 |
| 14 | ಸೆಪ್ಟಂಬರ್-2024 | 2441.74 |
| 15 | ಅಕ್ಟೋಬರ್-2024 | 2454.55 |
| 16 | ನವೆಂಬರ್-2024 | 2459.51 |
| 17 | ಡಿಸೆಂಬರ್-2024 | 2348.33 |
| **ಒಟ್ಟು** | | **39988.04** |

ui